# ನೀಲನಕ್ಷೆ

**ವಿಷಯ– ಐಚ್ಛಿಕ ಕನ್ನಡ** | **ತರಗತಿ– ಪ್ರಥಮ ಪಿಯುಸಿ**

| ಪಠ್ಯ | 1 ಅಂಕ | 2 ಅಂಕ | 3 ಅಂಕ | 4 ಅಂಕ ಪ್ರಶ್ನೆಗಳು | 4 ಅಂಕ ಭಾವಾರ್ಥ | ಒಟ್ಟು ಅಂಕಗಳು |
|---|---|---|---|---|---|---|
| ಪದ್ಯಭಾಗ 1) ವಚನಗಳು | 1 | 1 | 1 | 1 | | |
| 2) ಕೀರ್ತನೆಗಳು | 1 | 1 | 1 | 1 | 1 | |
| 3) ಜನಪದ ಹಾಗೂ ತತ್ವಪದ | 1 | 1 | 1 | 1 | | |
| 4) ಹೊಸಗನ್ನಡ ಕಾವ್ಯ | 7 | 4 | 2 | 2 | 1 | |
| ಒಟ್ಟು ಪ್ರಶ್ನೆಗಳು | 10 | 7 | 5 | 7 | | |
| ಉತ್ತರಿಸಬೇಕಾದದ್ದು | 10 | 5 | 3 | 4 | | |
| ಹೆಚ್ಚುವರಿ ಪ್ರಶ್ನೆಗಳು | – | 2 | 2 | 3 | | |
| ಒಟ್ಟು ಅಂಕಗಳು | 10 | 10 | 9 | 16 | | 45 |
| ಗದ್ಯಭಾಗ ಒಟ್ಟು ಪ್ರಶ್ನೆಗಳು | 9 | 4 | 3 | 4 | | |
| ಉತ್ತರಿಸಬೇಕಾದದ್ದು | 9 | 3 | 2 | 2 | | |
| ಹೆಚ್ಚುವರಿ ಪ್ರಶ್ನೆಗಳು | – | 1 | 1 | 2 | | |
| ಒಟ್ಟು ಅಂಕಗಳು | 9 | 6 | 6 | 8 | | 29 |
| ಭಾಷೆ, ಸಾಹಿತ್ಯ ಸ್ವರೂಪ ಒಟ್ಟು ಪ್ರಶ್ನೆಗಳು | 1 | 4 | – | 2 | | |
| ಉತ್ತರಿಸಬೇಕಾದದ್ದು | 1 | 3 | – | 1 | | |
| ಹೆಚ್ಚುವರಿ ಪ್ರಶ್ನೆಗಳು | – | 1 | – | 1 | | |
| ಒಟ್ಟು ಅಂಕಗಳು | 1 | 6 | – | 4 | | 11 |
| ರಚನೆ ಮತ್ತು ಭಾಷಾಭ್ಯಾಸ ಒಟ್ಟು ಪ್ರಶ್ನೆಗಳು | 15 | – | – | – | | |
| ಉತ್ತರಿಸಬೇಕಾದದ್ದು | 15 | – | – | – | | |
| ಹೆಚ್ಚುವರಿ ಪ್ರಶ್ನೆಗಳು | – | – | – | – | | |
| ಒಟ್ಟು ಅಂಕಗಳು | 15 | – | – | – | | 15 |
| ಒಟ್ಟು ಅಂಕಗಳು | | | | | | 100 |

**ಅನುಬಂಧ–1 (ಅ)**

| **ಘಟಕಗಳು** | **ಶೇಕಡಾ ಅಂಕಗಳು** |
|---|---|
| ಪದ್ಯ | 45 |
| ಗದ್ಯ | 29 |
| ಭಾಷೆ, ಸಾಹಿತ್ಯ | 11 |
| ಭಾಷಾಭ್ಯಾಸ | 10 |
| ರಚನೆ | 5 |
| ಒಟ್ಟು | 100 |

| **ಉದ್ದೇಶಗಳು** | **ಶೇಕಡಾ ಅಂಕಗಳು** |
|---|---|
| ಜ್ಞಾನ | 15 |
| ಗ್ರಹಿಕೆ | 24 |
| ಅಭಿವ್ಯಕ್ತಿ | 26 |
| ಪ್ರಶಂಸೆ | 15 |
| ಒಟ್ಟು | 100 |

| **ಕ್ಲಿಷ್ಟತೆ** | **ಶೇಕಡಾ ಅಂಕಗಳು** |
|---|---|
| ಸುಲಭ | 30 |
| ಸಾಧಾರಣ | 50 |
| ಕಠಿಣ | 20 |
| ಒಟ್ಟು | 100 |

| **ಪ್ರಶ್ನೆಗಳ ಸ್ವರೂಪ** | **ಒಟ್ಟು ಪ್ರಶ್ನೆಗಳ ಸಂಖ್ಯೆ** | **ಉತ್ತರಿಸಬೇಕಾದ ಪ್ರಶ್ನೆಗಳ ಸಂಖ್ಯೆ** |
|---|---|---|
| ವಸ್ತುನಿಷ್ಠ | 20 | 20 |
| ಅತಿ ಕಿರು ಉತ್ತರ | 15 | 15 |
| ಕಿರು ಉತ್ತರ | 23 | 16 |
| ವಿವರಣಾತ್ಮಕ ಉತ್ತರ | 13 | 07 |
| ಒಟ್ಟು ಸಂಖ್ಯೆ | 71 | 58 |

# ಪ್ರಥಮ ಪಿಯುಸಿ ಮಾದರಿ ಪ್ರಶ್ನೆ ಪತ್ರಿಕೆ

## ವಿಷಯ: ಐಚ್ಛಿಕ ಕನ್ನಡ (16)

ಅವಧಿ: 3 ಗಂಟೆ 15 ನಿಮಿಷ ಅಂಕಗಳು–100

ಅ–ವಿಭಾಗ

**I) ಸರಿಯಾದ ಉತ್ತರವನ್ನು ಆಯ್ಕೆ ಮಾಡಿ ಬರೆಯಿರಿ. 1x15=15**

1. 'ನೃಪ' ಪದದ ಅರ್ಥ_____
   ಅ) ಕೃಪೆ
   ಆ) ಮನುಷ್ಯ
   ಇ) ರಾಜ
   ಈ) ಮುಖ

2. 'ಇಳೆ' ಪದದ ಸಮಾನಾರ್ಥಕ ಪದಗಳು_____
   ಅ) ಗಗನ, ಆಕಾಶ
   ಆ) ಕಾಡು, ಅರಣ್ಯ
   ಇ) ಸಾಗರ, ಅಂಬುಧಿ
   ಈ) ಭೂಮಿ, ಪೃಥ್ವಿ

3. 'ನವ' ಪದದ ನಾನಾರ್ಥಗಳು_____
   ಅ) ಹಗಲು, ರಾತ್ರಿ
   ಆ) ಹೊಸತು, ಒಂಭತ್ತು
   ಇ) ಜಗ, ಜನ
   ಈ) ಯಶ, ನಾಶ

4. 'ಕಾವ್ಯ' ಪದದ ತದ್ಭವ ರೂಪ _____
   ಅ) ಕಬ್ಬಿಗ
   ಆ) ಕಬ್ಬ
   ಇ) ಕಾವ
   ಈ) ಕಾರ್ಯ

5. 'ಚಿಗುರೊಡೆದು' ಪದದ ಬಿಡಿಸಿ ಬರೆದ ಸರಿಯಾದ ರೂಪ_____
   ಅ) ಚಿಗುರು+ಒಡೆದು
   ಆ) ಚಿಗುರು+ಹೊಡೆದು
   ಇ) ಚಿಗು+ರೊಡೆದು
   ಈ) ಚಿಗುರೊಡೆ+ಇದು

6. ಕನಸುಗಳು ಇಲ್ಲಿ ಬಂಧಿಯಾಗಿವೆ.
   ಅ) ಸೆರೆಮನೆಯಲ್ಲಿ
   ಆ) ಹಾಳುಕೋಟೆಗಳಲ್ಲಿ
   ಇ) ಮನಸುಗಳಲ್ಲಿ
   ಈ) ಹೃದಯದಲ್ಲಿ

7. 'ಇಲ್ಲ ಭಾರತ ಬರಿಯ ಕನಸಿನಲ್ಲಿ' ಕವನವನ್ನು ರಚಿಸಿದ ಕವಿ_____
   ಅ) ಸತೀಶ ಕುಲಕರ್ಣಿ

ಆ) ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿ
ಇ) ಕೆ. ಷರೀಫಾ
ಈ) ಸುಬ್ಬು ಹೊಲೆಯಾರ್

8. ನೆಲನೆಕ್ಕಿ ಬದುಕಿದುದು______
   ಅ) ಚಪ್ಪಲಿ
   ಆ) ಊರುಗೋಲು
   ಇ) ರೈಲು
   ಈ) ಆಸೆ
9. 'ಅವಳ ಚರಿತ್ರೆ' ಪದ್ಯವನ್ನು ಈ ಕೃತಿಯಿಂದ ಆರಿಸಿಕೊಳ್ಳಲಾಗಿದೆ.
   ಅ) ಬುರ್ಖಾ ಪ್ಯಾರಡೈಸ್
   ಆ) ಶತಮಾನದ ಕಾವ್ಯ
   ಇ) ಮಂಕುತಿಮ್ಮನ ಕಗ್ಗ
   ಈ) ನನ್ನ ನಲ್ಲ
10. ಇದು ಮುತ್ತಿನ ಸರ ಇಳಿಬಿಟ್ಟಂತೆ ಸುರಿಯುತ್ತಿದೆ.
   ಅ) ಮಂಜು
   ಆ) ಮಳೆ
   ಇ) ಅಳು
   ಈ) ನೆತ್ತರು
11. ರೋಮನ್ ಕೆಥೋಲಿಕ್ ಕ್ರೈಸ್ತರ ಅತಿ ದೊಡ್ಡ ಯಾತ್ರಾ ಸ್ಥಳ______
   ಅ) ರೋಮ್
   ಆ) ಜೆರುಸಲೇಮ್
   ಇ) ಇಸ್ರೇಲ್
   ಈ) ಕೇರಳ
12. 'ದಾರಿ ಯಾವುದಯ್ಯಾ ಕಾಲೇಜಿಗೆ?' ಗದ್ಯವನ್ನು ಈ ಕೃತಿಯಿಂದ ಆರಿಸಿಕೊಳ್ಳಲಾಗಿದೆ.
   ಅ) ಬಿಚ್ಚಿದ ಜೋಳಿಗೆ
   ಆ) ನೆನಪಿನ ದೋಣಿಯಲ್ಲಿ
   ಇ) ಸುರಗಿ
   ಈ) ಭಿತ್ತಿ
13. ತಿರುಮಲಾಂಬ ಅವರ ಮೊದಲ ಪ್ರಕಟಿತ ಪ್ರಬಂಧ______
   ಅ) ನಭಾ
   ಆ) ವಿದ್ಯುಲ್ಲತಾ
   ಇ) ಸದಾಚಾರ
   ಈ) ಹಿತೈಷಿಣಿ
14. 'ದೋಸೆ ರಾಜಕೀಯ' ಪ್ರಬಂಧದ ಕರ್ತೃ______
   ಅ) ವೈದೇಹಿ
   ಆ) ಕುಂ. ವೀರಭದ್ರಪ್ಪ
   ಇ) ಶಿವರಾಮ ಕಾರಂತ
   ಈ) ಸ. ಜ. ನಾಗಲೋಟಿಮಠ
15. ನೆಟ್ಟಕಲ್ಲಿನ ಮುತ್ತಜ್ಜಿಯ ಹೆಸರು______
   ಅ) ಬಂಡೆವ್ವಜ್ಜಿ
   ಆ) ಉಡುಸಲಮ್ಮ
   ಇ) ಗುಡುದವ್ವ
   ಈ) ಮಾರವ್ವ

## II) ಹೊಂದಿಸಿ ಬರೆಯಿರಿ 1x5=5

16. ಅಶನ –ಮರಣ ಹೊಂದು
17. ವಿಪ್ರ –ಅನ್ನ
18. ಹರಿ –ಪ್ರವಹಿಸು
19. ವರ್ಣ –ಬಣ್ಣ
20. ಕಣ್ಣುಮುಚ್ಚು –ನಕ್ಷತ್ರ

–ಬ್ರಾಹ್ಮಣ

## III) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ. 1x10=5

21. ಎಲ್ಲಿಯವರೆಗೆ ಕರ್ಮಪೂಜೆ ಬೇಕು ಎನ್ನುವರು?
22. ತುಂಬಿದ ಸಭೆಯೊಳಗೆ ಯಾವುದು ಇರಬಾರದು?
23. ಯಾರನ್ನು ನೆನೆದರೆ ತಂಗಳು ಬಿಸಿಯಾಗುತ್ತದೆ?
24. ನಾವು ಯಾರ ದೇಟಿನ ಕಾಯಿಗಳು?
25. ಶ್ರಾವಣ ಯಾವ ಉಡುಪನ್ನು ತೊಟ್ಟು ಬಂದಿತು?
26. ಪಾರ್ವನು ಯಾವ ಕಾರಣಕ್ಕಾಗಿ ಆಡನ್ನು ಖರೀದಿಸಿದನು?
27. ಈಜಿಪ್ಟ್ ನಿಂದ ಪೂರ್ವಕ್ಕಿರುವ ರಾಷ್ಟ್ರಗಳಿಗೆಲ್ಲ ಸ್ಫೂರ್ತಿ ಕೊಟ್ಟ ನಗರ ಯಾವುದು?
28. ಯಾವುದು ಜನರ ದೃಷ್ಟಿಯಲ್ಲಿ ಸ್ವಾಗತಾರ್ಹ ವಿಶೇಷವಾಗಿದೆ?
29. ವಡ್ಡಟ್ಟಿಯ ಗ್ರಾಮದೇವತೆ ಯಾರು?
30. ಭಾಷೆಯನ್ನು ಕುರಿತು ಮಹಾಕವಿ ದಂಡಿ ಏನನ್ನು ಹೇಳುತ್ತಾನೆ?

ಆ–ವಿಭಾಗ

## IV) ಕೆಳಗಿನ ಪ್ರಶ್ನೆಗಳಲ್ಲಿ ಐದಕ್ಕೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ. 2x5=10

31. ಯಾವುದನ್ನು ಕರುಣಿಸೆಂದು ಕವಿ ಕೇಳಿಕೊಳ್ಳುತ್ತಾನೆ?
32. ಅಶನ ಮತ್ತು ಪಾಲ್ಬೆಣ್ಣೆಯನ್ನು ಯಾರಿಗೆ ನೀಡಬೇಕು?
33. ಹಳ್ಳ–ಕೊಳ್ಳದಲ್ಲಿ ಹೆಣ ಯಾವಾಗ ಹರಿದಾಡಿ ಹೋದವು?
34. ಮಾವಿನಕಾಯಿಗಳಲ್ಲಿರುವ ಭೇದ ಯಾವುದು?
35. ಅನ್ನ ಹಾಗೂ ಚಿನ್ನ ಯಾವುದು?
36. ಕ್ರೂರ ಮುದ್ರೆ ಎಲ್ಲೆಲ್ಲಿ ಕಾಣುತ್ತಿದೆ?
37. ಮಹಾನದಿಗೆ ಕವಿ ವಂದಿಸಲು ಕಾರಣವೇನು?

## V) ಕೆಳಗಿನವುಗಳಲ್ಲಿ ಮೂರು ಹೇಳಿಕೆಗಳಿಗೆ ಸಂದರ್ಭ ಸೂಚಿಸಿ ಸ್ವಾರಸ್ಯ ವಿವರಿಸಿ. 3x3=9

38. 'ನಾದ ಪ್ರಿಯನೂ ಅಲ್ಲ'
39. 'ವೇಷಧಾರಿಗಳಿಗೆ ಕಾಶೀಯಾತ್ರೆ ಫಲವು ಬಾಹೋದೆ?'
40. 'ಬಳಸದಿರದ್ವೈತವನು ಬಾಹ್ಯದಲಿ'
41. 'ಉಗ್ರರೆ ಚದುರರೆ ಮೈಮನ ಒಡ್ಡಿರಿ ಹೊಸ ಆಹ್ವಾನಕೆ'
42. 'ಬಡ ಮೋಚಿಯಾ ಜೋಡಿ ಮಕ್ಕಳೆ'

## VI) ಕೆಳಗಿನವುಗಳಲ್ಲಿ ಮೂರು ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ. 4x3=12

43. ಎಂಥ ಪರೀಕ್ಷೆ ಒಡ್ಡಿದರೂ ಮನುಷ್ಯ ತನ್ನ ಮೂಲ ಸತ್ವವನ್ನು ಕಳೆದುಕೊಳ್ಳಬಾರದು ಎಂಬ ಆಶಯ ಅಕ್ಕನ ವಚನದಲ್ಲಿ ಹೇಗೆ ವ್ಯಕ್ತವಾಗಿದೆ?
44. ಮಾಗಿದ ಮನಸ್ಸು ಇರಬೇಕಾದ ಬಗೆ ಹೆಳವನಕಟ್ಟೆ ಗಿರಿಯಮ್ಮನ ಕೀರ್ತನೆಯಲ್ಲಿ ಹೇಗೆ ವ್ಯಕ್ತವಾಗಿದೆ?
45. ಒಕ್ಕಲಿಗರು ಎದುರಿಸಿದ ಬರಗಾಲದ ಭೀಕರ ಪರಿಸ್ಥಿತಿಯನ್ನು ವಿವರಿಸಿರಿ.

46. ರೈತನನ್ನು 'ಸಾಮ್ರಾಜ್ಯ ಕಾಳಿಗೆ ಕೊಡುವ ಬಲಿ' ಎಂದು ಏಕೆ ಹೇಳಲಾಗಿದೆ?
47. 'ರೈಲ್ವೇ ನಿಲ್ದಾಣದಲ್ಲಿ ' ಕವಿತೆಯಲ್ಲಿ ತಾಯಿ ಮಗಳ ಅಂತಃಕರಣ ಹೇಗೆ ವ್ಯಕ್ತವಾಗಿದೆ?

**VII) ಕೆಳಗಿನ ಯಾವುದಾದರೂ ಒಂದು ಪದ್ಯದ ಭಾವಾರ್ಥವನ್ನು ವಿವರಿಸಿ. 4x1=4**

48. ಹೆಣ್ಣೀನ ಜನುಮಾಕ ಅಣ್ಣತಮ್ಮರು ಬೇಕ
ಬೆನ್ನು ಕಟ್ಟುವರು ಸಭೆಯೊಳಗ ಸಾವಿರ
ಹೊನ್ನ ಕಟ್ಟುವರು ಉಡಿಯೊಳಗ

49. ಇರುವ ಕೆಲಸವ ಮಾಡು ಕಿರಿದೆನದೆ ಮನವಿಟ್ಟು
ದೊರೆತುದ ಹಸಾದವೆಂದುಣ್ಣು ಗೊಣಗಿಡದೆ
ಧರಿಸು ಲೋಕದ ಭರವ ಪರಮಾರ್ಥವನು ಬಿಡದೆ
ಹೊರಡು ಕರೆಬರಲಳದೆ – ಮಂಕುತಿಮ್ಮ

ಇ–ವಿಭಾಗ

**VIII) ಕೆಳಗಿನ ಪ್ರಶ್ನೆಗಳಲ್ಲಿ ಮೂರಕ್ಕೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ. 2x3=6**

50. ಬ್ರಾಹ್ಮಣ್ಯದ ಚಿಹ್ನೆಗಳಾವುವು?
51. ಪೂಜಾರಿ ನೊಂದವರಿಗೆ ಹೇಗೆ ಸಾಂತ್ವನ ನೀಡುತ್ತಾನೆ?
52. ಗಾಂಧಿ ಟೋಪಿಯ ಬಗ್ಗೆ ಲೇಖಕರ ತಂದೆಯವರಿಗೆ ಯಾವ ಭಾವನೆ ಇತ್ತು?
53. ನೆಟಕಲ್ಲು ತನ್ನ ಹೆಸರನ್ನು ಏನೆಂದು ಬದಲಾಯಿಸಿಕೊಂಡನು? ಏಕೆ?

**IX) ಕೆಳಗಿನವುಗಳಲ್ಲಿ ಎರಡು ಹೇಳಿಕೆಗಳಿಗೆ ಸಂದರ್ಭ ಸೂಚಿಸಿ ಸ್ವಾರಸ್ಯ ವಿವರಿಸಿ. 3x2=6**

54. 'ಒಂದು ದಿನದ ರಚನೆಯಲ್ಲ; ಯುಗಮಾನಗಳ ರಚನೆ'
55. 'ನಿನ್ನ ಮಗನ ಜವಾಬ್ದಾರಿ ನನಗೆ ಬಿಡು'
56. 'ತಾಯಿಯಿಲ್ಲದ ತಬ್ಬಲಿಯಾಗಬೇಕಾಯಿತು'

**X) ಕೆಳಗಿನವುಗಳಲ್ಲಿ ಎರಡು ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ. 4x2=8**

57. ಧೂರ್ತರು ವಂಚನೆಗೆ ಬಳಸಿದ ಉಪಾಯ ಮತ್ತು ಅದರ ಪರಿಣಾಮವನ್ನು ಕುರಿತು ಬರೆಯಿರಿ.
58. ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು ನಗರ ಪರಿಸರಕ್ಕೆ ಕಾಲಿಟ್ಟಾಗ ಎದುರಿಸುವ ಸಮಸ್ಯೆಗಳು 'ದಾರಿ ಯಾವುದಯ್ಯಾ ಕಾಲೇಜಿಗೆ?' ಪಾಠದಲ್ಲಿ ಹೇಗೆ ಚಿತ್ರಿತವಾಗಿದೆ?
59. ಮುದುಕಿಗೆ ಕುಬುಸ ತೊಡಿಸಲು ವಡವಟ್ ದಂಪತಿಗಳು ಪಟ್ಟ ಪಾಡನ್ನು ವಿವರಿಸಿರಿ.
60. ವಿಮಲಕ್ಕನ ದೋಸೆ ಕಾರುಬಾರಿನ ಬಗ್ಗೆ ಮನೆಯವರ ಪ್ರತಿಕ್ರಿಯೆಯೇನು?

ಈ– ವಿಭಾಗ

(ಭಾಷೆ, ಸಾಹಿತ್ಯ ಸ್ವರೂಪ)

**XI) ಕೆಳಗಿನವುಗಳಲ್ಲಿ ಮೂರು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ. 2x3=6**

61. ಸಾಹಿತ್ಯ ರಚನೆಗೆ ಪ್ರೇರಣೆ ಯಾವುದು?
62. ಸಾಹಿತ್ಯ ರಚನೆಗೆ ಅಗತ್ಯವಾದ ಮೂರು ಅಂಶಗಳನ್ನು ಕುರಿತು ಬರೆಯಿರಿ.
63. ಹತ್ತನೇ ಶತಮಾನವನ್ನು 'ಪಂಪಯುಗ' ವೆಂದು ಕರೆಯಲು ಕಾರಣಗಳೇನು?
64. 'ದಾಸ ಸಾಹಿತ್ಯ'ಕ್ಕಿರುವ ಇತರ ಹೆಸರುಗಳಾವುವು?

**XII) ಕೆಳಗಿನವುಗಳಲ್ಲಿ ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ. 4x1=4**

65. ಹತ್ತನೇ ಶತಮಾನದ ಕನ್ನಡ ಸಾಹಿತ್ಯದ ವಿಶೇಷತೆಯನ್ನು ಕುರಿತು ಬರೆಯಿರಿ.
66. ಸಾಹಿತ್ಯದ ಪ್ರಯೋಜನವನ್ನು ವಿವರಿಸಿ.

ಉ–ವಿಭಾಗ
(ರಚನೆ)

**XIV ಅ) ಗ್ರಹಿಕೆ** **1x5=5**

**ಈ ಪಠ್ಯೇತರ ಗದ್ಯಭಾಗದಿಂದ ಆಯ್ದ ಪ್ರಶ್ನೆಗಳನ್ನು ಉತ್ತರಿಸಿ.**

'ಬೇಡಲು ಬಂದಿಹೆನು ಕನ್ನಡದ ದಾಸಯ್ಯ' ಎಂಬ ಹಾಡಿನಿಂದ ಪ್ರಸಿದ್ಧರಾದವರು ಶಾಂತಕವಿಗಳು. ಇವರು 1856 ರಲ್ಲಿ ಧಾರವಾಡ ಜಿಲ್ಲೆಯ ಸಾತೇನಹಳ್ಳಿಯಲ್ಲಿ ಜನಿಸಿದರು. ಶಾಂತಕವಿಗಳ ಪೂರ್ಣ ಹೆಸರು ಬಾಳಚಾರ್ಯ ಗೋಪಾಲಾಚಾರ್ಯ ಸಕ್ಕರಿ. ಇವರು ನಾಟಕಕಾರರು, ಕವಿಗಳು ಮತ್ತು ಕೀರ್ತನಕಾರರೂ ಆಗಿದ್ದರು. ಕರ್ನಾಟಕ ಏಕೀಕರಣಕ್ಕಾಗಿ ಶ್ರಮಿಸಿದವರಲ್ಲಿ ಇವರೂ ಒಬ್ಬರು. ನಾಡು ನುಡಿಗಳ ಬಗ್ಗೆ ಕನ್ನಡಿಗರಲ್ಲಿ ಎಚ್ಚರ ಮೂಡಿಸಲು ಅನೇಕ ನಾಟಕ, ಕೀರ್ತನೆ, ಕವಿತೆಗಳನ್ನು ಬರೆಯುವುದರ ಜೊತೆಗೆ ಸಭೆ ನಡೆಸಿ ಭಾಷಣಗಳನ್ನು ಮಾಡಿದ್ದಾರೆ. 'ಉಷಾ ಹರಣ' ಇವರು ಬರೆದ ಮೊದಲ ನಾಟಕ. 'ಶ್ರೀಯಾಳ ಸತ್ವಪರೀಕ್ಷೆ', 'ಕೀಚಕ ವಧೆ', 'ವತ್ಸಲಾಹರಣ', 'ಸುಧನ್ವ ವಧೆ', ಮುಂತಾದವು ಇವರ ನಾಟಕಗಳು. ಇವರು ಕನ್ನಡದಲ್ಲಿ ಅರವತ್ತಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. 1920 ರಲ್ಲಿ ಇವರು ನಿಧನ ಹೊಂದಿದರು.

ಪ್ರಶ್ನೆಗಳು:

67. 'ಬೇಡಲು ಬಂದಿಹೆನು ಕನ್ನಡದ ದಾಸಯ್ಯ' ಎಂಬ ಹಾಡಿನಿಂದ ಪ್ರಸಿದ್ಧರಾವರು ಯಾರು?
68. ಶಾಂತ ಕವಿಗಳು ಎಲ್ಲಿ ಜನಿಸಿದರು?
69. ಶಾಂತಕವಿಗಳ ಪೂರ್ಣ ಹೆಸರು ಏನು?
70. ಶಾಂತಕವಿಗಳ ಮೊದಲ ನಾಟಕ ಯಾವುದು?
71. ಶಾಂತ ಕವಿಗಳು ಕನ್ನಡ ನಾಡುನುಡಿಯ ಬಗ್ಗೆ ಎಚ್ಚರ ಮೂಡಿಸಲು ಏನು ಮಾಡಿದ್ದಾರೆ?